

# ಕಲರ್‌ಫುಲ್ ಕಾರ್ನ್..!









ಕೆಂಪು, ಬಿಳಿ, ನೀಲಿ, ಹಸಿರು, ನೇರಳೆ, ತಿಳಿ ಗುಲಾಬಿ ಮುಂತಾದ ಬಣ್ಣಗಳಿಂದ ಹೊಳೆಯುವ ಗಾಜಿನ ಮಣಿಗಳನ್ನು ಅಥವಾ ಮಕ್ಕಳು ತಿನ್ನುವ ಜೆಮ್ಸ್ (ಪೆಪ್ಪರ್ಮೆಂಟ್)ಗಳನ್ನು ಅಂದವಾಗಿ ಪೋಣಿಸಿ ಮಾಡಿದ ಚಂದನೆಯ ಕಲಾಕೃತಿಯೋ ಎಂಬಂತೆ ಭಾಸವಾಗುವ ಇದು ರೈತನೊಬ್ಬ ಬೆಳೆದ ಮುಸುಕಿನ ಜೋಳ (ಕಾರ್ನ್) ಎಂದರೆ ಹಲವರಿಗೆ ಅಚ್ಚರಿಯಾಗುವುದು ಖಂಡಿತ.

'ಕಾಮನಬಿಲ್ಲಿನ ಕಾರ್ನ್' ಎಂದೇ ಕರೆಯುವ ಈ ವಿಶಿಷ್ಟ ವರ್ಣಗಳ ಜೋಳವನ್ನು ಮೊಟ್ಟ ಮೊದಲ ಬಾರಿ ಬೆಳೆದಿದ್ದು ಒಕ್ಲಾಹಾಮಾದ ಕಾಲರ್ ಬಾನರ್ಸ್ ಎಂಬ ರೈತ. ಈತ ತಾನು ಬೆಳೆದ ಜೋಳದ ತೆನೆಯ ನಡುವೆ ಅಲ್ಲಲ್ಲಿ ವಿಶಿಷ್ಟ ಬಣ್ಣಗಳಿಂದ ಹೊಳೆಯುವ ಕಾಳುಗಳನ್ನು ಗಮನಿಸಿದ. ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಪ್ರತ್ಯೇಕವಾಗಿ ಬಿತ್ತನೆ ಮಾಡಿದ. ಹಲವಾರು ವರ್ಷಗಳ ನಿರಂತರ ಪ್ರಯತ್ನದ ನಂತರ ಬೇರೆ ಬೇರೆ ಬಣ್ಣದ ಕಾಳುಗಳು ಒಂದೇ ತೆನೆಯಲ್ಲಿ ಬರುವಂತಹ ತಳಿಯನ್ನು ಬೆಳೆದ. ಈ ರೈತನ ಪರಿಶ್ರಮದ ಫಲವೇ ಹೊಳೆ ಹೊಳೆಯುವ ಮೋಹಕ ವರ್ಣಗಳಿಂದ ಎಲ್ಲರ ಮನಸೆಳೆಯುವ ಕಲಾತ್ಮಕ ಫಸಲಾಯಿತು. ನಂತರ ಈ ಅತ್ಯದ್ಭುತ ಬೆಳೆ ತನ್ನೊಂದಿಗೆ ಕೊನೆಗೊಳ್ಳಬಾರದೆಂಬ ಆಶಯದಿಂದ ಕಾಲರ್ ಬಾನರ್ಸ್, ತಾನು ಸಾಯುವ ಮುನ್ನ, ಬಲು ಜತನದಿಂದ ಸಂಗ್ರಹಿಸಿದ್ದ ಬಣ್ಣದ ಬೀಜಗಳನ್ನು ತನ್ನ ಗೆಳೆಯ ಗ್ರೆಗ್ ಶೋಯೆನ್‌ಗೆ ನೀಡಿದನಂತೆ. ಈತ ಅವುಗಳನ್ನು ಅರಿಜೋನಾದಲ್ಲಿ ಅತ್ಯುತ್ತಮ ಬೀಜಗಳ ಮಾರಾಟಗಾರನಾದ ಬಿಲ್ ಮ್ಯಾಕ್ ಡೋರ್ಮ್ಯಾನ್ ಎಂಬಾತನಿಗೆ ನೀಡಿದನಂತೆ. ಇವುಗಳನ್ನು ನೋಡಿದ ಕೂಡಲೇ ಆತ 'ವಾಹ್! ಇಂತಹ ಬಹು ವರ್ಣದ ಜೋಳದ ತೆನೆಯನ್ನು ನಾನು ಇದೇ ಮೊದಲು ನೋಡುತ್ತಿರುವುದು' ಎಂದು ಅಚ್ಚರಿಯಿಂದ ಉದ್ಗರಿಸಿದನಂತೆ. ಈತನ ಬೀಜ ಕಂಪನಿಯ ವೆಬ್‌ಸೈಟ್‌ನಲ್ಲಿ ಬಣ್ಣದ ಕಾರ್ನ್‌ಗಳನ್ನು ನೋಡಿ ಮರುಳಾದ ಜನರು ನಿರೀಕ್ಷೆಗೂ ಮೀರಿ ಈ ಬೀಜಗಳನ್ನು ಖರೀದಿಸಲು ಮುಗಿ ಬಿದ್ದರಂತೆ. ಹಾಗೆಯೇ ಹಸಿಯಾಗಿ ತಿನ್ನಲು ಯೋಗ್ಯವಲ್ಲದ ಈ ಬಣ್ಣದ ಮುಸುಕಿನ ಜೋಳವನ್ನು, ಪಾಪ್ ಕಾರ್ನ್ ಅಥವಾ ಕಾರ್ನ್ ಫ್ಲೋರ್(ಹಿಟ್ಟು) ಮಾಡಿ ಬಳಸಬಹುದು.

■ ವಿದ್ಯಾ ವಿ. ಹಾಲಭಾವಿ